ಚುಕ್ಕೆ ಗುರುತಿಲ್ಲದ ಪ್ರಶ್ನೆ 34 : 86
ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್. ಡಿ. (ಹೊಳೇನರಸೀಪುರ)
ಉತ್ತರಿಸುವ ಸಚಿವರು : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಯ್ಡು (ಅಬಕಾರಿ, ವಾರ್ತಾ, ಬೆಂಗಳೂರು ಜಲಮಂಡಳಿ ಸಚಿವರು ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಕಳೆದ ಮೂರು ವರ್ಷಗಳಿಂದ ಬೆಂಗಳೂರು ಜಲಮಂಡಳಿಯಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ ಕೈಗೊಂಡ ಯೋಜನೆ ಕ್ರಮಗಳಾವುವು? (ವಿವರ ನೀಡುವುದು)	ಬೆಂಗಳೂರು ಜಲಮಂಡಳಿಯು ಕಳೆದ ಮೂರು ವರ್ಷಗಳಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತದೆ. **1. ಕಾವೇರಿ ನಾಲ್ಕನೇ ಹಂತ ಮೊದಲನೇ ಘಟ್ಟದಿಂದ, ಹೆಚ್ಚುವರಿ ದಿನಂಪ್ರತಿ ನೂರು ದಶಲಕ್ಷ ಲೀಟರ್ ನೀರನ್ನು ಪೂರೈಸುವ ಯೋಜನೆ.** ಈ ಹಿಂದೆ ಇದ್ದ ಏಳು ನಗರಸಭೆ ಹಾಗೂ ಒಂದು ಪುರಸಭೆ (ಈಗಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು) ಗಳಿಗೆ ನೀರು ಸರಬರಾಜು ಮಾಡಲು JnNURM ಯೋಜನೆಯಡಿಯಲ್ಲಿ ರೂ. 13.00 ಕೋಟಿ ಅಂದಾಜು ವೆಚ್ಚದಲ್ಲಿ ನವೆಂಬರ್ 2006ರಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು ಡಿಸೆಂಬರ್ 2007ರಲ್ಲಿ ಯಶಸ್ವಿಯಾಗಿ ಕಾರ್ಯಗತ ಗೊಳಿಸಲಾಗಿದೆ. **2. ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ -2:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಹೆಚ್ಚುತ್ತಿರುವ ನೀರಿನ ಬೇಡಿಕೆ ಹಾಗೂ ಒಳಚರಂಡಿ ವ್ಯವಸ್ಥೆಗಳನ್ನು ಕಲ್ಪಿಸಲು ದಿನಂಪ್ರತಿ 500 ದಶಲಕ್ಷ ಲೀಟರ್ ಹೆಚ್ಚುವರಿ ನೀರು ಸರಬರಾಜು ಮಾಡುವ ಪ್ರಸ್ತು ಯೋಜನೆಯನ್ನು ಜಪಾನ್ ಅಂತಾರಾಷ್ಟ್ರೀಯ ಬ್ಯಾಂಕ್ ನೆರವಿನೊಡನೆ ರೂ.3,383.70ಕೋಟಿ ಅಂದಾಜು ವೆಚ್ಚದಲ್ಲಿ 2006-

		07ರಲ್ಲಿ ಕೈಗೆತ್ತಿಕೊಂಡಿದ್ದು, 2011-12ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಪ್ರಸ್ತುತ ಯೋಜನೆಯಲ್ಲಿ ನಗರದ ಏಳು ಸ್ಥಳಗಳಲ್ಲಿ ನೆಲಮಟ್ಟದ ಜಲಸಂಗ್ರಹಗಾರ, 9 ಸ್ಥಳಗಳಲ್ಲಿ ಕೊಳಚೆನೀರು ಶುದ್ಧೀಕರಣ ಘಟಕಗಳ ಸ್ಥಾಪನೆ, 8 ಸ್ಥಳಗಳಲ್ಲಿ ಮಧ್ಯಂತರ ಕೊಳಚೆನೀರು ಜಲರೇಚಕ ಯಂತ್ರಗಳ ಸ್ಥಾಪನೆ, ಕೊಳಚೆ ನೀರು ಸಾಗಿಸುವ ಕೊಳಚೆಗಳ ಅಳವಡಿಕೆ ಹಾಗೂ ನೀರು ವಿತರಣಾ ವ್ಯವಸ್ಥೆಯ ಸುಧಾರಣೆಯ (ಲೆಕ್ಕ ಸಿಗದ ನೀರಿನ ಪ್ರಮಾಣವನ್ನು ಕಡಿಮೆಗೊಳಿಸುವಿಕೆ) ಹಾಗೂ ಕೊಳಗೇರಿಗಳ ಅಭಿವೃದ್ಧಿ ಕಾರ್ಯಗಳು ಸೇರಿರುತ್ತವೆ. **3. ವೃಷಭಾವತಿ ಕಣಿವೆಯಲ್ಲಿ ಸುಸಂಘಟಿತ ನೀರಿನ ನಿರ್ವಹಣೆ :** 2011-2012ನೇ ವರ್ಷದಲ್ಲಿ ಪೂರ್ಣಗೊಳ್ಳಲಿರುವ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ-2ರ ಪ್ರಾರಂಭದ ನಂತರು ಒಬ್ಬ ಮನುಷ್ಯನಿಗೆ ದಿನವೊಂದಕ್ಕೆ ಸರಬರಾಜಾಗುವ ನೀರಿನ ಪ್ರಮಾಣ 140ಲೀಟರ್‌ಗಳನ್ನು ಮೀರುವುದಿಲ್ಲ ಆದ್ದರಿಂದ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ವೃಷಭಾವತಿ ಕೊಳಚೆ ನೀರಿನ ಘಟಕದಲ್ಲಿ ಸಂಸ್ಕರಿಸಿದ ಕೊಳಚೆ ನೀರನ್ನು ಕುಡಿಯುವ ಮಟ್ಟಕ್ಕೆ ಶುದ್ಧೀಕರಿಸಿ ಅರ್ಕಾವತಿ ನದಿ ನೀರಿನ ಪಾತ್ರದಲ್ಲಿ ಹರಿಸಿ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಸಿ ಅಲ್ಲಿಂದ ಪುನಃ ನೀರನ್ನು ಶುದ್ಧೀಕರಿಸಿ ನಗರಕ್ಕೆ ಸರಬರಾಜು ಮಾಡಲು ಯೋಜಿಸಲಾಗಿದೆ. ಈ ಯೋಜನೆಯಿಂದ ಸುಮಾರು ದಿನಂಪ್ರತಿ 135 ದಶಲಕ್ಷ ನೀರನ್ನು ಸರಬರಾಜು ಮಾಡಲಾಗುತ್ತದೆ. ಪ್ರಸ್ತುತ ಯೋಜನೆಯನ್ನು jnNURM ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಒಪ್ಪಿಗೆ ದೊರೆತಿದ್ದು, ಅಂದಾಜು ವೆಚ್ಚ ರೂ.471.33 ಕೋಟಿಗಳಾಗಿರುತ್ತದೆ.

		4. ಬೆಳಂದೂರು ಹಾಗೂ ನಾಗವಾರಾ ಕೆರೆಗಳಲ್ಲಿ ಸುಸಂಘಟಿತ ನೀರಿನ ನಿರ್ವಹಣೆ : ಪ್ರಸ್ತುತ ಯೋಜನೆಯಡಿಯಲ್ಲಿ ಮೇಲಿನ ಎರಡು ಕೆರೆಗಳಲ್ಲಿ ಲಭ್ಯವಿರುವ ನೀರನ್ನು ಶುದ್ಧೀಕರಿಸಿ ಬೆಳಂದೂರು ಕೆರೆಯಿಂದ ದಿನಂಪ್ರತಿ 60 ದಶಲಕ್ಷ ಲೀಟರ್ ಹಾಗೂ ನಾಗವಾರಾ ಕೆರೆಯಿಂದ 30 ದಶಲಕ್ಷ ಲೀಟರ್ ಕುಡಿಯುವ ನೀರನ್ನು ಸರಬರಾಜು ಮಾಡಲು ಯೋಜಿಸಲಾಗಿದೆ. ಕೆರೆಯ ನೀರನ್ನು ಸುಧಾರಿಸಿದ ರೀತಿಯಲ್ಲಿ ಶುದ್ಧೀಕರಿಸಿ ಪ್ರಸ್ತುತವಿರುವ ನೀರಿನ ಬೇಡಿಕೆಯನ್ನು ಪೂರೈಸಲು ಮರಳಿ ಪಡೆಯುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ. 280.00 ಕೋಟಿಗಳಾಗಿರುತ್ತದೆ. **5. ಬೃಹತ್ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ :** ಈ ಹಿಂದೆ ಇದ್ದ 7 ನಗರ ಸಭೆ ಹಾಗೂ 1 ಪುರಸಭೆ ಪ್ರದೇಶಗಳಿಗೆ ನೀರು ವಿತರಣೆಗೆ ವ್ಯವಸ್ಥೆಗಳನ್ನು ಕಲ್ಪಿಸಲು ಈ ಯೋಜನೆಯನ್ನು ರೂ.447 ಕೋಟಿ ಅಂದಾಜು ವೆಚ್ಚದಲ್ಲಿ 2005-06ನೇ ವರ್ಷದಲ್ಲಿ ಕೈಗೆತ್ತಿಕೊಳ್ಳ ಲಾಗಿದೆ. **6. ಕರ್ನಾಟಕ ಪುರ ಸುಧಾರಣೆ ಯೋಜನೆ :** ಪ್ರಸ್ತುತ ಯೋಜನೆಯಲ್ಲಿ ಈ ಹಿಂದೆ ಇದ್ದ 7 ನಗರ ಸಭೆ ಹಾಗೂ 1 ಪುರಸಭೆ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಸೇರಿರುತ್ತದೆ. ಈ ಯೋಜನೆಯನ್ನು ರೂ. 663.00 ಕೋಟಿ ವೆಚ್ಚದಲ್ಲಿ ವಿಶ್ವಬ್ಯಾಂಕ್ ಹಾಗೂ ಜೆ.ಎನ್.ಎನ್.ಯು.ಆರ್.ಎಮ್. ಆರ್ಥಿಕ ಸಹಾಯದಡಿ ಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.

		7. JnNURM ಆರ್ಥಿಕ ಸಹಾಯದಡಿಯಲ್ಲಿ ಕೈಗೆತ್ತಿಕೊಂಡಿರುವ ಬೆಂಗಳೂರು ನಗರ ವಿತರಣಾ ಜಾಲಕ್ಕೆ ಸರಬರಾಜಾಗುವ ನೀರನ್ನು ಮಾಪಿಸಲು ಬಲ್ಕ ಮೀಟರ್‌ಗಳನ್ನು ಅಳವಡಿಸುವ ಯೋಜನೆ. ಬೆಂಗಳೂರು ನಗರದ ನೀರು ವಿತರಣಾ ಜಾಲದಲ್ಲಿ ಸರಬರಾಜಾಗುವ ನೀರಿನ ಪ್ರಮಾಣವನ್ನು ವಿವಿಧ ನೊಂದಾಯಿತ ಸ್ಥಳಗಳಲ್ಲಿ ಮಾಪನ ಮಾಡಲು ವಿವಿಧ ವ್ಯಾಸದ ಬಲ್ಕ ನೀರಿನ ಮೀಟರ್‌ಗಳನ್ನು ಅಳವಡಿಸುವ ಯೋಜನೆಯನ್ನು ರೂ.16.00 ಕೋಟಿ ವೆಚ್ಚದಲ್ಲಿ JnNURM ಆರ್ಥಿಕ ನೆರವಿನಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.
ಆ.	ಆ ಯೋಜನೆಗಳಿಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಹಾಗೂ ಖರ್ಚು ಮಾಡಿದ ಹಣವೆಷ್ಟು;	**1. ಕಾವೇರಿ ನಾಲ್ಕನೇ ಹಂತ ಮೊದಲನೇ ಘಟ್ಟದಿಂದ, ಹೆಚ್ಚುವರಿ ದಿಂಪ್ರತಿ ನೂರು ದಶಲಕ್ಷ ಲೀಟರೇ ನೀರನ್ನು ಪೂರೈಸುವ ಯೋಜನೆ.** ಭಾರತ ಸರ್ಕಾರ (jn NURM)ರೂ. 1.716 ಕೋಟಿಗಳು. ಕರ್ನಾಟಕ ಸರ್ಕಾರ - ರೂ. 0.735 ಕೋಟಿಗಳು ಬೆಂಗಳೂರು ಜಲಮಂಡಳಿ - ರೂ. 11.548 ಕೋಟಿಗಳು. ಯೋಜನೆಗಾಗಿರುವ ಒಟ್ಟು ವೆಚ್ಚ - ರೂ.14.05 ಕೋಟಿಗಳು. **2. ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ 2:** ಜೆ.ಬಿ.ಐ.ಸಿ.-ರೂ. 18.08 ಕೋಟಿಗಳು. ಕರ್ನಾಟಕ ಸರ್ಕಾರ - ರೂ. 140.00 ಕೋಟಿಗಳು. ಬೆಂಗಳೂರು ಜಲಮಂಡಳಿ - ರೂ. 3.37 ಕೋಟಿಗಳು. ಯೋಜನೆಗಾಗಿರುವ ಒಟ್ಟು ವೆಚ್ಚ - ರೂ. 162.45 ಕೋಟಿಗಳು.

		3. ವೃಷಭಾವತಿ ಕಣಿವೆಯಲ್ಲಿ ಸುಸಂಘಟಿತ ನೀರಿನ ನಿರ್ವಹಣೆ : ಯಾವುದೇ ವೆಚ್ಚವಾಗಿರುವುದಿಲ್ಲ. **4. ಬೆಳಂದೂರು ಹಾಗೂ ನಾಗವಾರಾ ಕೆರೆಗಳಲ್ಲಿ ಸುಂಸಘಟಿತ ನೀರಿನ ನಿರ್ವಹಣೆ :** ಯಾವುದೆ ವೆಚ್ಚವಾಗಿರುವುದಿಲ್ಲ. **5. ಬೃಹತ್ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ :** ಪ್ರಸತುತ ಯೋಜನೆಗೆ ರೂ. 295.51 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. **6. ಕರ್ನಾಟಕ ಪುರ ಸುಧಾರಣೆ :** ಈ ಯೋಜನೆಗೆ ಭಾರತ ಸರ್ಕಾರ ರೂ. 22.36 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ. **7 JnNURM ಆರ್ಥಿಕ ಸಹಾಯದಡಿಯಲ್ಲಿ ಕೈಗೆತ್ತಿಕೊಂಡಿರುವ ಬೆಂಗಳೂರು ನಗರ ವಿತರಣಾ ಜಾಲಕ್ಕೆ ಸರಬರಾಜಾಗುವ ನೀರನ್ನು ಮಾಪಿಸಲು ಬಲ್ಕ ಮೀಟರ್‌ಗಳನ್ನು ಅಳವಡಿಸುವ ಯೋಜನೆ** ಭಾರತ ಸರ್ಕಾರ (JnNURM)- ರೂ. 1.07 ಕೋಟಿಗಳು. ಕರ್ನಾಟಕ ಸರ್ಕಾರ - ರೂ. 0.46 ಕೋಟಿಗಳು.
೩.	ಈ ಯೋಜನೆಗಳು ಯಾವ ಹಂತದಲ್ಲಿವೆ? (ಯೋಜನೆವಾರು ಅಂಕಿ ಅಂಶಗಳನ್ನು ನೀಡುವುದು)	**1. ಕಾವೇರಿ ನಾಲ್ಕನೇ ಹಂತ ಮೊದಲನೇ ಘಟ್ಟದಿಂದ, ಹೆಚ್ಚುವರಿ ದಿನಂಪ್ರತಿ ನೂರು ದಶಲಕ್ಷ ಲೀಟರ್ ನೀರನ್ನು ಪೂರೈಸುವ ಯೋಜನೆ :** ಪ್ರಸ್ತುತ ಯೋಜನೆಯನ್ನು ದಿಸೆಂಬರ್ 2007 ರಲ್ಲಿ ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗಿದೆ. **2. ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ 2:** ಈ ಯೋಜನೆಯಡಿಯಲ್ಲಿ ಬರುವ 13 ನೀರು ಸರಬರಾಜು

		ಕಾಮಗಾರಿಗಳಲ್ಲಿ ೬ ಕಾಮಗಾರಿಗಳಿಗೆ ಪೂರ್ವರ್ಹತೆಯುಳ್ಳ ಸಂಸ್ಥೆಗಳ ಆಯ್ಕೆ ಕಾರ್ಯ ಮುಗಿದಿರುತ್ತದೆ. ಸಧ್ಯದಲ್ಲೆ ಪೂರ್ವರ್ಹತೆಗೊಂಡ ಸಂಸ್ಥೆಗಳಿಗೆ ಬಿಡ್‌ಗಳನ್ನು ನೀಡಲಾಗುತ್ತದೆ. 3 ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ನೀಡಲಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 7-8-2008ಆಗಿರುತ್ತದೆ. ಇದಲ್ಲದೆ 11 ಕೊಳಚೆ ನೀರು ಕಾಮಗಾರಿಗಳಿಗೆ ಸಂಬಂಧಿಸಿದಂತೆ 4 ಕಾಮಗಾರಿಗಳಿಗೆ ಪೂರ್ವರ್ಹತೆಯುಳ್ಳ ಸಂಸ್ಥೆಗಳ ಆಯ್ಕೆ ಕಾರ್ಯ ಮುಗಿದಿರುತ್ತದೆ. ಸದ್ಯದಲ್ಲಿ ಪೂರ್ವರ್ಹತೆಗೊಂಡ ಸಂಸ್ಥೆಗಳಿಗೆ ಬಿಡ್‌ಗಳನ್ನು ನೀಡಲಾಗುತ್ತದೆ. 2 ಕೊಳಚೆ ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ನೀಡಲಾಗಿದ್ದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 31-7-2008 ಮತ್ತು 28-8-2008 ಆಗಿರುತ್ತದೆ. ಈ ಯೋಜನೆಯ ನೀರು ಸರಬರಾಜು ಕಾಮಗಾರಿಗಳು 2011-12ರ ಹೊತ್ತಿಗೆ ಹಾಗೂ ಕೊಳಚೆ ನೀರು ಕಾಮಗಾರಿಗಳು 2012-13ರ ಹೊತ್ತಿ ಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. **3. ವೃಷಭಾವತಿ ಕಣಿವೆಯಲ್ಲಿ ಸುಸಂಘಟಿತ ನೀರಿನ ನಿರ್ವಹಣೆ :** ಈ ಯೋಜನೆಗೆ "ಆಸಕ್ತಿ ವ್ಯಕ್ತಪಡಿಸಲು ಆಹ್ವಾನ" ವನ್ನು ಸಂಸ್ಥೆಗಳನ್ನು ಪೂರ್ವರ್ಹತೆಗಳಿಸಲು ಕರೆಯಲಾಗಿದೆ. ಪೂರ್ವರ್ಹತೆಗಳನ್ನು ಸಲ್ಲಿಸಲು 5-8-2008 ಕಡೆಯ ದಿನಾಂಕವಾಗಿರುತ್ತದೆ. ಯೋಜನೆಯನ್ನು 2010-2011 ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. **4. ಬೆಳಂದೂರು ಹಾಗೂ ನಾಗವಾರಾ ಕೆರೆಗಳಲ್ಲಿ ಸುಸಂಘಟಿತ ನೀರಿನ ನಿರ್ವಹಣೆ :**

		ಈ ಯೋಜನೆಗೆ ಪ್ರತೀಕ್ಷೆಯುಳ್ಳ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30-9-2008 ಆಗಿರುತ್ತದೆ. **5. ಬೃಹತ್ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ :** ಈ ಯೋಜನೆಯಡಿಯಲ್ಲಿ ನೀರು ಸರಬರಾಜು ವಿತರಣೆ ಜಾಲವನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಂಡಿದ್ದು, 2700ಕಿ.ಮೀ. ವಿತರಣಾ ಕೊಳವೆಗಳ ಜಾಲವನ್ನು ಅಳವಡಿಸುವ ಕಾರ್ಯಗಳು ಮುಗಿದಿರುತ್ತವೆ. ಈ ಯೋಜನೆಯ ಮತ್ತೊಂದು ಕಾಮಗಾರಿಯಡಿಯಲ್ಲಿ ವಿತರಣಾ ಜಾಲಕ್ಕೆ ನೀರನ್ನು ಒದಗಿಸಲು 85 ಕಿ.ಮೀ. ಉದ್ದದ ಮುಖ್ಯ ಕೊಳವೆಗಳನ್ನು ಅಳವಡಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಈಗಾಗಲೇ 65 ಕಿ.ಮೀ.ಗಳಷ್ಟು ಕೊಳವೆಗಳನ್ನು ಅಳವಡಿಸಲಾಗಿದೆ. **6. ಕರ್ನಾಟಕ ಪುರ ಸುಧಾರಣೆ ಯೋಜನೆ :** ಈ ಹಿಂದೆ ಇದ್ದ 7 ನಗರ ಸಭೆ ಹಾಗೂ 1 ಪುರಸಭೆ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿ ಹಾಗೂ ದಾಸ್ತಾವೇಜುಗಳನ್ನು ಸಿದ್ಧಪಡಿಸಿ ವಿಶ್ವಬ್ಯಾಂಕ್ ಹಾಗೂ JnNURM ನ ಒಪ್ಪಿಗೆಗಾಗಿ ಸಲ್ಲಿಸಲಾಗಿದೆ. ಒಪ್ಪಿಗೆ ಬಂದ ನಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತದೆ. ಕಾಮಗಾರಿಗಳನ್ನು ಮೂರುವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. **7. JnNURM ಆರ್ಥಿಕ ಸಹಾಯದಡಿಯಲ್ಲಿ ಕೈಗೆತ್ತಿಕೊಂಡಿರುವ ಬೆಂಗಳೂರು ನಗರ ವಿತರಣಾ ಜಾಲಕ್ಕೆ ಸರಬರಾಜಾಗುವ ನೀರನ್ನು ಮಾಪಿಸಲು ಬಲ್ಕ ಮೀಟರ್‌ಗಳನ್ನು ಅಳವಡಿಸುವ ಯೋಜನೆ :** ಈ ಯೋಜನೆಯಡಿಯಲ್ಲಿ ಒಟ್ಟು 218 ಮೀಟರ್‌ಗಳನ್ನು

		ಅಳವಡಿಸಲು ಉದ್ದೇಶಿಸಲಾಗಿದ್ದು, ಈಗಾಗಲೇ ಭಾರಿ ಗಾತ್ರದ 6 ಮೀಟರ್‌ಗಳನ್ನು ಅಳವಡಿಸಲಾಗಿದೆ. 100 ಮೀಟರ್‌ಗಳನ್ನು ಪರೀಕ್ಷಿಸಲಾಗಿದ್ದು, ಅಳವಡಿಸಲು ದೃಢೀಕರಣ ಮಾಡಲಾಗಿದೆ. ಈ ಯೋಜನೆಯನ್ನು ಈ ವರ್ಷಾಂತ್ಯದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
ಈ.	ಬೆಂಗಳೂರು ಜಲಮಂಡಳಿಯಲ್ಲಿ ಪ್ರಸಕ್ತ ವರ್ಷ ಪೂರ್ಣಗೊಳಿಸಲಾಗುವ ಯೋಜನೆಗಳು ಯಾವುವು ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು?	JnNURM. ಆರ್ಥಿಕ ಸಹಾಯದಡಿಯಲ್ಲಿ ಕೈಗೆತ್ತಿಕೊಂಡಿರುವ ಬೆಂಗಳೂರು ನಗರ ವಿತರಣಾ ಜಾಲಕ್ಕೆ ಸರಬರಾಜಾಗುವ ನೀರನ್ನು ಮಾಪಿಸಲು ಬಲ್ಕ ಮೀಟರ್‌ಗಳನ್ನು ಅಳವಡಿಸಲು ಯೋಜನೆ. ಮೇಲಿನ ಯೋಜನೆಯನ್ನು ಈ ವರ್ಷಾಂತ್ಯದಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ. 14.00 ಕೋಟಿಗಳಾಗಿರುತ್ತದೆ.